# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

## ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ – ೩<br>Part – III | ಬೆಂಗಳೂರು, ಶುಕ್ರವಾರ, ೦೯, ಜನವರಿ, ೨೦೨೬(ಪುಷ್ಯ, ೧೯, ಶಕವರ್ಷ, ೧೯೪೭)<br>BENGALURU, FRIDAY, 09, JANUARY, 2026(PUSHYA , 19, SHAKAVARSHA, 1947) | ನಂ. ೪೯<br>No.49 |


**ಕರ್ನಾಟಕ ಸರ್ಕಾರ**

**ಕಡತ ಸಂಖ್ಯೆ:ನಅಇ 304 ಎಂಎಲ್‌ಆರ್ 2025(e)**

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, **ದಿನಾಂಕ08/01/2026.**

**ಅಧಿಸೂಚನೆ**

ಕರ್ನಾಟಕ ಪೌರಸಭೆಗಳ ಅಧಿನಿಯಮ 1964 ರ ಸೆಕ್ಷನ್–3 ರೊಂದಿಗೆ ಓದಿಕೊಂಡಂತೆ ಸೆಕ್ಷನ್–9 & 361 ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಘನತೆವೆತ್ತ ಕರ್ನಾಟಕ ರಾಜ್ಯಪಾಲರು ಈ ಕೆಳಗಿನವುಗಳನ್ನು ಗಮನಿಸಿ ಅಂದರೆ:

1. ಅಂಥ ಪ್ರದೇಶದ ಜನಸಂಖ್ಯೆ ಐವತ್ತು ಸಾವಿರಕ್ಕಿಂತ ಕಡಿಮೆಯಿಲ್ಲದ ಹೊರತು;
2. ಅಂಥ ಪ್ರದೇಶದಲ್ಲಿನ ಜನಸಂಖ್ಯೆಯ ಸಾಂದ್ರತೆಯು ಒಂದು ಚದರ ಕಿಲೋ ಮೀಟರ್ ಪ್ರದೇಶಕ್ಕೆ ಒಂದು ಸಾವಿರದ ಐದು ನೂರು ನಿವಾಸಿಗಳಿಗಿಂತ ಕಡಿಮೆಯಿಲ್ಲದ ಹೊರತು;
3. ಹಿಂದಿನ ನಿಕಟಪೂರ್ವ ಜನಗಣತಿಯಲ್ಲಿ ಅಂಥ ಪ್ರದೇಶದಿಂದ ಸ್ಥಳೀಯ ಆಡಳಿತಕ್ಕಾಗಿ ತೆರಿಗೆ ಮತ್ತು ತೆರಿಗೆಯಿಲ್ಲದ ಇತರ ಸಂಪನ್ಮೂಲಗಳಿಂದ ಉತ್ಪಾದಿತವಾದ ರಾಜಸ್ವ ವಾರ್ಷಿಕ ಒಂಭತ್ತು ಲಕ್ಷ ರೂಪಾಯಿಗಳು ಅಥವಾ ವಾರ್ಷಿಕ ತಲಾ ಒಬ್ಬನಿಗೆ ನಲವತ್ತೈದು ರೂಪಾಯಿಗಳ ದರದಂತೆ ಲೆಕ್ಕ ಹಾಕಲಾದ ಮೊತ್ತ ಇವೆರಡರಲ್ಲಿ ಯಾವುದು ಹೆಚ್ಚೋ ಆ ಮೊತ್ತಕ್ಕಿಂತ ಕಡಿಮೆಯಿರದ ಹೊರತು:
4. ಅಂಥ ಪ್ರದೇಶದಲ್ಲಿ ಕೃಷಿಯೇತರ ಚಟುವಟಿಕೆಗಳಲ್ಲಿನ ಉದ್ಯೋಗದ ಶೇಕಡಾವಾರು ಒಟ್ಟು ಉದ್ಯೋಗದ ಶೇಕಡ ಐವತ್ತಕ್ಕಿಂತ ಕಡಿಮೆಯಿಲ್ಲದ ಹೊರತು.

ಶೆಡ್ಯೂಲ್–ಬಿ ಯಲ್ಲಿ ನಿರ್ದಿಷ್ಟಪಡಿಸಲಾದ ಪರಿಮಿತಿಯುಳ್ಳ ಶೆಡ್ಯೂಲ್–ಎ ರಲ್ಲಿನ ಬೆಳಗಾವಿ ಜಿಲ್ಲೆಯ "ರಾಮದುರ್ಗ ಪುರಸಭೆ ಪ್ರದೇಶ" ವನ್ನು ಈ ಅಧಿಸೂಚನೆಯನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರುವಂತೆ ಆಡಳಿತಾತ್ಮಕ ದೃಷ್ಟಿಯಿಂದ "ಸಣ್ಣ ನಗರ ಪ್ರದೇಶ" ಎಂದು ಉದ್ಘೋಷಿಸಿ, ಸದರಿ ಸಣ್ಣ ನಗರ ಪ್ರದೇಶವನ್ನು "ರಾಮದುರ್ಗ ನಗರಸಭೆ" ಎಂದು ಸಹ ಪದನಾಮೀಕರಿಸಲು ಹಾಗೂ ಸದರಿ ಸಣ್ಣ ನಗರ ಪ್ರದೇಶಕ್ಕೆ "ನಗರಸಭೆ"ಯನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ.

ಈ ಅಧಿಸೂಚನೆಯನ್ನು ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿಸಲಾಗಿದೆ. ಈ ಬಗ್ಗೆ ಯಾವುದೇ ಆಕ್ಷೇಪಣೆ/ಸಲಹೆಗಳನ್ನು ಸಲ್ಲಿಸಲು ಇಚ್ಛಿಸುವ ಎಲ್ಲಾ ವ್ಯಕ್ತಿಗಳು ಅದನ್ನು ಲಿಖಿತದಲ್ಲಿ ಕಾರಣಸಹಿತವಾಗಿ ಸದರಿ ಅಧಿಸೂಚನೆಯನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, 9ನೇ ಮಹಡಿ, ವಿ.ವಿ.ಗೋಪುರ, ಬೆಂಗಳೂರು ಇವರಿಗೆ ಸಲ್ಲಿಸಬೇಕೆಂದು ಹಾಗೂ ಅಧಿಸೂಚನೆಯನ್ನು ಸದರಿ ಅವಧಿಯ ತರುವಾಯ ನಿಗದಿತ ಸಮಯದಲ್ಲಿ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಟಿ ಮಂಜುನಾಥ)**
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ

**ಸಂಖ್ಯೆ:ನಅಇ 304 ಎಂಎಲ್ಆರ್ 2025(e).**

**ಶೆಡ್ಯೂಲ್-ಎ**

| **ಜಿಲ್ಲೆ** | **ಪರಿಗಣಿಸಲಾಗುವ ಸ್ಥಳೀಯ ಸಂಸ್ಥೆ ಹೆಸರು** | **ಸೇರ್ಪಡೆಗೊಳಿಸಲು ಉದ್ದೇಶಿಸಿರುವ ಪ್ರದೇಶಗಳ ವಿವರ** | **ಒಟ್ಟು ಪ್ರದೇಶ** |
|---|---|---|---|
| ಬೆಳಗಾವಿ | ರಾಮದುರ್ಗ ಪುರಸಭೆ | ಹಾಲಿ ರಾಮದುರ್ಗ ಪುರಸಭೆ ವ್ಯಾಪ್ತಿಯ ಪ್ರದೇಶಗಳು | 5.09 ಚದರ ಕಿಲೋ ಮೀಟರ್ |

**ಶೆಡ್ಯೂಲ್-ಬಿ**

**ಉತ್ತರ:** ತುರನೂರ ಗ್ರಾಮ ರಸ್ತೆ ಪಶ್ಚಿಮ ಮೂಲೆಯಿಂದಾ ರಸ್ತೆಯ ಹದ್ದಿಗುಂಟಾ ಪೂರ್ವಾಭಿಮುಖವಾಗಿ ಚಲಿಸಿ ರಿ.ಸ ನಂ.33 ರ ಪೂರ್ವದ ಮೂಲೆ ಸೇರುವದು. ಅಲ್ಲಿಂದ ರಿ.ಸ ನಂ.33 ರ ಹದ್ದಿಗುಂಟಾ ಉತ್ತರಕ್ಕೆ ಚಲಿಸಿ ಉತ್ತರ ಪಶ್ಚಿಮ ಮೂಲೆ ಸೇರುವದು. ಅಲ್ಲಿಂದ ರಿ.ಸ ನಂ.33 ರ ಹದ್ದಿಗುಂಟಾ ಪೂರ್ವಾಭಿಮುಖವಾಗಿ ಚಲಿಸಿ ರಿ.ಸ ನಂ. 221 ಕಿಲಬನೂರ ರಿ.ಸ ನಂ.87 ಉತ್ತರ ದಂಡೆಯಿಂದಾ ಪೂರ್ವಾಭಿಮುಖವಾಗಿ ಚಲಿಸಿ ಕಿಲಗನೂರು ಸರಹದ್ದಿನ ಸ.ನಂ.44, 45, 46, 47, 49, 51, 52, 53, 55, 56, 62, 63, 64 ರ ದಂಡೆ ಗುಂಟಾ ಚಲಿಸಿ ರಿ.ಸ ನಂ. 65 ರ ಉತ್ತರ ಪೂರ್ವ ಮೂಲೆಗೆ ಸೇರುವದು.

**ಪೂರ್ವ:** ಕಿಲಬನೂರ ಹದ್ದಿ ರಿ.ಸ ನಂ. 65 ರ ಈಶಾನ್ಯ ಮೂಲೆಯಿಂದ ದಕ್ಷಿಣಾಭಿಮುಖವಾಗಿ ಬಳಸುತ್ತ ಕಿಲಬನೂರ ಹದ್ದಿಯ ರಿ.ಸ ನಂ.66, 67, 69 ರ ಪೂರ್ವದ ದಂಡೆಗುಂಟಾ ರಿ.ಸ ನಂ.68 ರ ದಕ್ಷಿಣ ಮೂಲೆ ಸೇರುವದು. ಅಲ್ಲಿಂದ ಸದರಿ ರಿ.ಸ ನಂ.68 ಪಶ್ಚಿಮಾಭಿಮುಖವಾಗಿ ಚಲಿಸಿ ರಿ.ಸ ನಂ.183 ಪೂರ್ವ ಮೂಲೇ ಸೇರುವದು ಅಲ್ಲಿಂದ ರಿ.ಸ ನಂ.183 ರ ಹದ್ದಿಗುಂಟ ದಕ್ಷಿಣಾಭಿಮುಖವಾಗಿ ಚಲಿಸಿ ರಿ.ಸ ನಂ.187, 188 ರ ದಂಡಗುಂಟಾ ಸಾಗಿ ಮಲಪ್ರಭಾ ನದಿಯ ದಕ್ಷಿಣ ಮೂಲೆಗೆ ಸೇರುವದು.

**ದಕ್ಷಿಣ:** ಮಲಪ್ರಭಾ ನದಿಯ ಪೂರ್ವ ಮೂಲೆಯಿಂದಾ ಪಶ್ಚಿಮಾಭಿಮುಖವಾಗಿ ಚಲಿಸಿ ಮಲಪ್ರಭಾ ರಿಸ.ನಂ.189, 231, 263, 264, 1, 2, 3, 4, 5 ಸ್ಮಶಾನ ರಿ.ಸ ನಂ.275, 276, 274, 273, 270 ವೀರಶೈವ ಸಮಾಜದ ಸ್ಮಶಾನದಿಂದಾ ತುರನೂರ ರಿ.ಸ ನಂ. 270,269,268,267,266 ಪಶ್ಚಿಮ ಮೂಲೇ ಸೇರುವದು.

**ಪಶ್ಚಿಮ:** ಮಲಪ್ರಭಾ ನದಿಯ ಪಶ್ಚಿಮ ಮೂಲೇಯ ತುರನೂರ ರಿ.ಸ ನಂ.66 ರ ಹದ್ದಿನಿಂದ ಉತ್ತರಾಭಿಮುಖವಾಗಿ ರಾಜ್ಯಹೆದ್ದಾರಿ ಸೇರುವದು, ಅಲ್ಲಿಂದ ರಿ.ಸ ನಂ.66 ರ ಹದ್ದಿಗುಂಟಾ ರಿ.ಸ ನಂ.36 ರ ಪಶ್ಚಿಮ ಮೂಲೆಗೆ ಸೇರುವುದು ಮತ್ತು ಅಲ್ಲಿಂದ ರಾಜ್ಯ ಹೆದ್ದಾರಿ ಸೇರುವದು, ಅಲ್ಲಿಂದ ರಾಜ್ಯ ಹೆದ್ದಾರಿ ದಾಟಿ ತುರನೂರ ರಿ.ಸ ನಂ.39, 43 ರ ಹದ್ದಿಗುಂಟಾ ಸಾಗಿ ರಿ.ಸ ನಂ.43 ರ ದಕ್ಷಿಣ ಮೂಲೆ ಸೇರುವದು. ಅಲ್ಲಿಂದ ಉತ್ತರಾಭಿಮುಖವಾಗಿ ಚಲಿಸಿ ರಿ.ಸ ನಂ.43, 44 ದಾಟಿ ತುರನೂರ ರಸ್ತೆಯ ಉತ್ತರ ಮೂಲೆ ಸೇರುವದು.

## GOVERNMENT OF KARNATAKA

**No.UDD 304 MLR 2025(e).**

Karanataka Government Secretariat,
Vikasa Soudha,
Bengaluru, **dated:08/01/2026.**

## NOTIFICATION

In exercise of the powers conferred by the Section-3 read with Section-9 and 361 of the Karnataka Municipalities Act, 1964, the Town Municipal Area of Ramadurga of Belagavi District is proposed to be notified as the "Smaller Urban Area" as mentioned in the Schedule "A" along with boundaries mentioned in the Schedule "B" and further to be declared as the "City Municipal Council of Ramadurga" and constitute the City Municipal Council to the said smaller urban area with effect from the date of publishing this Notification in the Official Gazette by His Excellency, the Governor of Karnataka for the purpose of administration having regard to:

i. The population of such area is not less than fifty thousand;
ii. The density of population in such area is not less than one thousand five hundred inhabitants to one square kilo meter of area;
iii. The revenue generated for local administration from such area from tax and non-tax sources in the year of the last preceding census is not less than rupees nine lakhs per annum or a sum calculated at the rate of rupees forty-five per capita per annum, whichever is higher;
iv. The percentage of employment in non-agricultural activities is not less than fifty per cent of the total employment.

The notification is hereby published for the information of the Public. All the persons, who would like to file any objection/suggestion to this Notification are hereby required to submit the same with reasons in writing to the Director, Directorate of Municipal Administration, 9th Floor, V.V.Tower, Bengaluru within 30 days from publication of this Notification in the Official Gazette. Further, Notification will be taken up for final consideration after the mentioned period of 30 days.

By Order and in the name of the
Governor of Karnataka,

**(T Manjunath)**
Under Secretary to Government,
Urban Development Department

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**No.UDD 304 MLR 2025(e)**

## Schedule-A

| District | Name of the ULB being considered | Areas to be included | Total Area |
|---|---|---|---|
| Belagavi | Ramadurga Town Municipal Council | Areas of present Town Municipal Council of Ramadurga | 5.09 Square Kilo Meters |

## Schedule-B

**East:** Starts from Kilabanur boundary RS 65 North East corner to moving towards south of Rs number 66, 67, 69 along eastern boundary reaching eastern corner of Rs number 68 and moving towards Eastern side along the boundaries of Kilabanur Rs number 187, 188 reaching Southern corner of Malaprabha river.

**South:** Along the East corner of Malaprabha river moving towards Western side along the boundaries of kilabanur rs number 189, 231, 263, 264, 1, 2, 3, 4, 5 Nekarpeth barial ground Rs number 275, 276, 274, 273, 270 Veereshaiva Samaja Barial ground and along the Turanur Rs number 270, 269, 268, 267, 266 boundaries reaching West corner of Malaprabha river

**West:** Along South corner of Malaprabha river moving towards Northern side along the boundarys of Turnur Rs number 66 reaching state highway edge from that moving along boundaries Rs number 66 reaching western corner of Rs number 36 joining state highway crossing state highway along the Turanur RS. number 39, 43 joining East corner of Turmur village road

**North:** From west corner of Turnur village road from west corner of moving towards eastern side joining East comer of thornoor Rs number 33 and then moving towards joining Northwest comer and moving towards the boundaries of Rs number 87 Kilabanur Rs number 44, 45, 46, 47, 49, 51, 52, 53, 55, 56, 62, 63, 64 and joining North East corner.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH